# ದಿನಪತ್ರಿಕೆ ಪ್ರಕಟಣೆ

ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
ನಂ.30, 15ನೇ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು - 560 011
ದೂರವಾಣಿ ಸಂಖ್ಯೆ: 26632783, 26633566

## ಮರು ನೇಮಕಾತಿ ಪ್ರಕಟಣೆ

ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಜಯನಗರ, ಬೆಂಗಳೂರು ಇದರಲ್ಲಿ ಖಾಲಿ ಇರುವ ಈ ಕೆಳಕಂಡ 22 ಹುದ್ದೆಗಳನ್ನು ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ದಿನಾಂಕ: 11.01.2023 ರಿಂದ ಅರ್ಜಿ ಆಹ್ವಾನಿಸಲಾಗಿದೆ.

| ಕ್ರಮ ಸಂಖ್ಯೆ | ಹುದ್ದೆಯ ವಿವರ | ವೇತನ ಶ್ರೇಣಿ ರೂ. | ನೇಮಕಾತಿ ಮಾಡಿಕೊಳ್ಳಬೇಕಾದ ಹುದ್ದೆಗಳ ಸಂಖ್ಯೆ |
|---|---|---|---|
| 1 | ಮುಖ್ಯ ಕಾರ್ಯನಿರ್ವಹಣಾಧಿಕಾರಿ | 40050-56550 | 1 |
| 2 | ಹಿರಿಯ ವ್ಯವಸ್ಥಾಪಕರು | 36300-53850 | 1 |
| 3 | ಕಂಪ್ಯೂಟರ್ ಮ್ಯಾನೇಜರ್ (ಸಿಸ್ಟಂ ಅಡ್ಮಿನಿಸ್ಟ್ರೇಟರ್ ಮುಖ್ಯಸ್ಥ) | 28100-50100 | 1 |
| 4 | ವ್ಯವಸ್ಥಾಪಕರು | 28100-50100 | 3 |
| 5 | ಅಕೌಂಟೆಂಟ್ | 24000-45300 | 2 |
| 6 | ಅಸಿಸ್ಟೆಂಟ್ ಅಕೌಂಟೆಂಟ್ | 21600-40050 | 2 |
| 7 | ದ್ವಿತೀಯ ದರ್ಜೆ ಸಹಾಯಕರು | 17650-32000 | 2 |
| 8 | ಅಟೆಂಡರ್ | 12500-24000 | 10 |
| | | ಒಟ್ಟು | 22 |

ಅರ್ಜಿ ನಮೂನೆ/ಮೀಸಲಾತಿ/ವಿದ್ಯಾರ್ಹತೆ/ವಯೋಮಿತಿ/ಅರ್ಜಿಶುಲ್ಕ/ಆಯ್ಕೆ ವಿಧಾನ/ ಲಗತ್ತಿಸಬೇಕಾದ ಪ್ರಮಾಣ ಪತ್ರಗಳು, ನಿಬಂಧನೆಗಳು ಮತ್ತು ಸೂಚನೆಗಳು ಇತ್ಯಾದಿ ವಿವರಗಳು ಬ್ಯಾಂಕಿನ **Website** : www.bcbbank.co ರಲ್ಲಿ ಲಭ್ಯವಿರುತ್ತದೆ. ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: 27.01.2023 ಸಂಜೆ 5.00 ಘಂಟೆಯೊಳಗ ಖುದ್ದಾಗಿ/ಅಂಚೆ/ಕೊರಿಯರ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ವಿ.ಸೂ.:- ದಿನಾಂಕ:25.05.2022ರ ನೇಮಕಾತಿ ಪ್ರಕಟಣೆಯನುಸಾರ ಮೇಲ್ಕಂಡ ಹುದ್ದೆಗಳಿಗೆ ಈಗಾಗಲೇ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪುನಃ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

ಸಿಬ್ಬಂದಿ ನೇಮಕಾತಿ ಸಮಿತಿ ಪರವಾಗಿ
ಸಹಿ/-
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ: 10.01.2023

THE BHARATH CO-OP. BANK LTD. * Jayanagar Bangalore-11

**For The Bharat Co-op. Bank Ltd.**

Chief Executive Officer
H.O. Jayanagar, Bangalore-11

THE BHARATH CO-OP. BANK LTD. Jayanagar Bangalore-11

# ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ನಂ.30, 15ನೇ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು - 560 011
ದೂರವಾಣಿ ಸಂಖ್ಯೆ: 26632783, 26633566

## ಮರು ನೇಮಕಾತಿ ಪ್ರಕಟಣೆ

ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಜಯನಗರ, ಬೆಂಗಳೂರು ಇದರಲ್ಲಿ ಖಾಲಿ ಇರುವ ಈ ಕೆಳಕಂಡ 22 ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಖುದ್ದಾಗಿ/ಅಂಚೆ/ಕೊರಿಯರ್ ಮೂಲಕ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಪ್ರಾರಂಭದ ದಿನಾಂಕ: 11.01.2023 ರಿಂದ ದಿನಾಂಕ: 27.01.2023 ಸಂಜೆ 5.00 ಘಂಟೆಯೊಳಗೆ ಇರುತ್ತದೆ.

ನೇರ ನೇಮಕಾತಿಗೆ ಹೊರಡಿಸಲಾಗಿರುವ ಹುದ್ದೆಗಳ ವಿವರ ಹಾಗೂ ಮೀಸಲಾತಿ ಈ ಕೆಳಗಿನಂತಿರುತ್ತದೆ.:-

| ಕ್ರಮ ಸಂಖ್ಯೆ | ಹುದ್ದೆಯ ವಿವರ | ಒಟ್ಟು ಹುದ್ದೆಗಳು | ವರ್ಗಗಳ ವಿವರ |
|---|---|---|---|
| 1 | ಮುಖ್ಯ ಕಾರ್ಯನಿರ್ವಹಣಾಧಿಕಾರಿ | 1 | ಸಾಮಾನ್ಯ |
| 2 | ಹಿರಿಯ ವ್ಯವಸ್ಥಾಪಕರು | 1 | ಸಾಮಾನ್ಯ |
| 3 | ಕಂಪ್ಯೂಟರ್ ಮ್ಯಾನೇಜರ್ (ಸಿಸ್ಟಂ ಅಡ್ಮಿನಿಸ್ಟ್ರೇಟರ್ ಮುಖ್ಯಸ್ಥ) | 1 | ಸಾಮಾನ್ಯ |
| 4 | ವ್ಯವಸ್ಥಾಪಕರು | 3 | ಸಾಮಾನ್ಯ - 2 ಹುದ್ದೆಗಳು, ಪರಿಶಿಷ್ಟ ಜಾತಿ-1 ಹುದ್ದೆ, |
| 5 | ಅಕೌಂಟೆಂಟ್ | 2 | ಸಾಮಾನ್ಯ - 1 ಹುದ್ದೆ, ಪರಿಶಿಷ್ಟ ಪಂಗಡ-1 ಹುದ್ದೆ, |
| 6 | ಅಸಿಸ್ಟೆಂಟ್ ಅಕೌಂಟೆಂಟ್ | 2 | ಸಾಮಾನ್ಯ |
| 7 | ದ್ವಿತೀಯ ದರ್ಜೆ ಸಹಾಯಕರು | 2 | ಸಾಮಾನ್ಯ - 1 ಹುದ್ದೆ ಹಿಂದುಳಿದ ವರ್ಗ 3ಎ - 1 ಹುದ್ದೆ |
| 8 | ಅಟೆಂಡರ್ | 10 | ಸಾಮಾನ್ಯ - 8 ಹುದ್ದೆ<br>ಪ.ಜಾತಿ - 2 ಹುದ್ದೆ |
| | ಒಟ್ಟು ಹುದ್ದೆಗಳು | 22 | |

For The Bharat Co-op. Bank Ltd.

Chief Executive Officer
H.O. Jayanagar, Bangalore-11

1. ವೇತನ ಶ್ರೇಣಿ:-

| | | |
|---|---|---|
| 1 | ಮುಖ್ಯ ಕಾರ್ಯನಿರ್ವಹಣಾಧಿಕಾರಿ | ರೂ.40050-1050-45300-1200-52500-1350-56550 - (ಒಟ್ಟು ವೇತನ ರೂ.80400/-) |
| 2 | ಹಿರಿಯ ವ್ಯವಸ್ಥಾಪಕರು | ರೂ.36300-900-39000-1050-45300-1200-52500-1350-53850 - (ಒಟ್ಟು ವೇತನ ರೂ.72909/-) |
| 3 | ಕಂಪ್ಯೂಟರ್ ಮ್ಯಾನೇಜರ್<br>(ಸಿಸ್ಟಂ ಅಡ್ಮಿನಿಸ್ಟ್ರೇಟರ್ ಮುಖ್ಯಸ್ಥ) | ರೂ.28100-700-28800-800-33600-900-39000-1050-45300-1200-50100 -<br>(ಒಟ್ಟು ವೇತನ ರೂ.56530) |
| 4 | ವ್ಯವಸ್ಥಾಪಕರು | ರೂ.28100-700-28800-800-33600-900-39000-1050-45300-1200-50100<br>(ಒಟ್ಟು ವೇತನ ರೂ.56530/-) |
| 5 | ಅಕೌಂಟೆಂಟ್ | ರೂ.24000-600-24600-700-28800-800-33600-900-39000-1050-45300<br>(ಒಟ್ಟು ವೇತನ ರೂ.48340/-) |
| 6 | ಅಸಿಸ್ಟೆಂಟ್ ಅಕೌಂಟೆಂಟ್ | ರೂ.21600-600-24600-700-28800-800-33600-900-39000-1050-40050<br>(ಒಟ್ಟು ವೇತನ ರೂ.43546/-) |
| 7 | ದ್ವಿತೀಯ ದರ್ಜೆ ಸಹಾಯಕರು | ರೂ.17650-450-19000-500-21000-600-24600-700-28800-800- 32000<br>(ಒಟ್ಟು ವೇತನ ರೂ.35606/-) |
| 8 | ಅಟೆಂಡರ್ | ರೂ.12500-250-13000-300-14200-350-15600-400-17200-450-19000- 500-21000-600-24000<br>(ಒಟ್ಟು ವೇತನ ರೂ.25319/-) |

2. <u>ವಿದ್ಯಾರ್ಹತೆ:-</u>

| | | |
|---|---|---|
| 1 | ಮುಖ್ಯ ಕಾರ್ಯನಿರ್ವಹಣಾಧಿಕಾರಿ | ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ ಹೊಂದಿರಬೇಕು.<br>**ಆದ್ಯತೆ:-** ಸಿಎಐಐಬಿ/ಡಿಬಿಎಫ್/ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಬಿಸಿನೆಸ್ ಮ್ಯಾನೇಜ್‌ಮೆಂಟ್ ಅಥವಾ ತತ್ಸಮಾನ ಅರ್ಹತೆ ಅಥವಾ ಚಾರ್ಟರ್ಡ್/ಕಾಸ್ಟ್ ಅಕೌಂಟೆಂಟ್ ಇವುಗಳಲ್ಲಿ ಯಾವುದಾದರೂ ಕನಿಷ್ಟ ಒಂದು ವಿದ್ಯಾರ್ಹತೆ ಹೊಂದಿರುವವರಿಗೆ ಆದ್ಯತೆ.<br>ಅನುಭವ:- 1) ಬ್ಯಾಂಕಿಂಗ್ ವಲಯದಲ್ಲಿ ಮಧ್ಯಮ/ಹಿರಿಯ ಶ್ರೇಣಿಯಲ್ಲಿ ಕನಿಷ್ಟ 8 ವರ್ಷಗಳ ಸೇವಾ ಅನುಭವವಿರತಕ್ಕದ್ದು.<br>2) ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇತ್ತೀಚಿನ ಮಾಹಿತಿ ಮತ್ತು ತಂತ್ರಜ್ಞಾನದ ಅನುಭವವಿರತಕ್ಕದ್ದು. |

For The Bharat Co-op. Bank Ltd.

Chief Executive Officer
H.O. Jayanagar, Bangalore-11

THE BHARATH CO-OP. BANK LTD. Jayanagar Bangalore-11



| | | |
|---|---|---|
| 2 | ಹಿರಿಯ ವ್ಯವಸ್ಥಾಪಕರು | ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ ಪಡೆದಿರಬೇಕು.<br>ಅನುಭವ:- 1) ಬ್ಯಾಂಕಿಂಗ್ ವಲಯದಲ್ಲಿ ಮಧ್ಯಮ/ಹಿರಿಯ ಶ್ರೇಣಿಯಲ್ಲಿ ಕನಿಷ್ಠ 5 ವರ್ಷಗಳ ಸೇವಾ ಅನುಭವವಿರತಕ್ಕದ್ದು.<br>2) ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇತ್ತೀಚಿನ ಮಾಹಿತಿ ಮತ್ತು ತಂತ್ರಜ್ಞಾನದ ಅನುಭವವಿರತಕ್ಕದ್ದು. |
| 3 | ಕಂಪ್ಯೂಟರ್ ಮ್ಯಾನೇಜರ್ (ಸಿಸ್ಟಂ ಅಡ್ಮಿನಿಸ್ಟ್ರೇಟರ್ ಮುಖ್ಯಸ್ಥ) | ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಗಣಕ ವಿಜ್ಞಾನದಲ್ಲಿ ಬಿ.ಇ ಪದವಿ ಅಥವಾ ಕಂಪ್ಯೂಟರ್ ಅಪ್ಲಿಕೇಷನ್‌ನಲ್ಲಿ ಸ್ನಾತಕೋತ್ತರ ಪದವಿ (MCA) ಹೊಂದಿರಬೇಕು ಮತ್ತು ಬ್ಯಾಂಕಿಂಗ್ ವಲಯದ ಮಾಹಿತಿ ಮತ್ತು ತಂತ್ರಜ್ಞಾನ (Information Technology) ವಿಭಾಗದಲ್ಲಿ 5 ವರ್ಷಗಳು ಕೆಲಸ ಮಾಡಿರುವ ಅನುಭವಿರಬೇಕು. |
| 4 | ವ್ಯವಸ್ಥಾಪಕರು | ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ ಹೊಂದಿರಬೇಕು ಮತ್ತು ಕಂಪ್ಯೂಟರ್ ಆಪರೇಷನ್ ಮತ್ತು ಅಪ್ಲಿಕೇಷನ್ ಜ್ಞಾನ ಹೊಂದಿರಬೇಕು<br>ಅನುಭವ:- ಬ್ಯಾಂಕಿಂಗ್ ವಲಯದಲ್ಲಿ ಕನಿಷ್ಠ 5 ವರ್ಷಗಳ ಸೇವಾ ಅನುಭವವಿರತಕ್ಕದ್ದು. |
| 5 | ಅಕೌಂಟೆಂಟ್ | ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ವಾಣಿಜ್ಯ/ಸಹಕಾರ/ಮ್ಯಾನೇಜ್‌ಮೆಂಟ್ ವಿಷಯಗಳಲ್ಲಿ ಪದವಿ ಹೊಂದಿರಬೇಕು ಹಾಗೂ Tally Course ನಲ್ಲಿ ತೇರ್ಗಡೆಯಾದ ಪ್ರಮಾಣ ಪತ್ರದ ಜೊತೆಗೆ ಕಂಪ್ಯೂಟರ್ ಆಪರೇಷನ್ ಮತ್ತು ಅಪ್ಲಿಕೇಷನ್ ಜ್ಞಾನ ಹೊಂದಿರಬೇಕು.<br>ಅನುಭವ:- ಬ್ಯಾಂಕಿಂಗ್ ವಲಯದಲ್ಲಿ ಕೆಲಸ ಮಾಡಿದವರಿಗೆ ಆದ್ಯತೆ. |
| 6 | ಅಸಿಸ್ಟೆಂಟ್ ಅಕೌಂಟೆಂಟ್ | ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ವಾಣಿಜ್ಯ/ಸಹಕಾರ/ಮ್ಯಾನೇಜ್‌ಮೆಂಟ್ ವಿಷಯಗಳಲ್ಲಿ ಪದವಿ ಹೊಂದಿರಬೇಕು ಹಾಗೂ Tally Course ನಲ್ಲಿ ತೇರ್ಗಡೆಯಾದ ಪ್ರಮಾಣ ಪತ್ರದ ಜೊತೆಗೆ ಕಂಪ್ಯೂಟರ್ ಆಪರೇಷನ್ ಮತ್ತು ಅಪ್ಲಿಕೇಷನ್ ಜ್ಞಾನ ಹೊಂದಿರಬೇಕು<br>ಅನುಭವ:- ಬ್ಯಾಂಕಿಂಗ್ ವಲಯದಲ್ಲಿ ಕೆಲಸ ಮಾಡಿದವರಿಗೆ ಆದ್ಯತೆ. |
| 7 | ದ್ವಿತೀಯ ದರ್ಜೆ ಸಹಾಯಕರು | ದ್ವಿತೀಯ ಪಿ.ಯು.ಸಿ.ಯಲ್ಲಿ ತೇರ್ಗಡೆ ಹೊಂದಿರಬೇಕು ಮತ್ತು ಕಂಪ್ಯೂಟರ್‌ನಲ್ಲಿ ಸೂಕ್ತ ಅರಿವಿರಬೇಕು. |
| 8 | ಅಟೆಂಡರ್ | SSLC ಯಲ್ಲಿ ತೇರ್ಗಡೆ ಹೊಂದಿರಬೇಕು ಮತ್ತು ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು. |

For The Bharat Co-op. Bank Ltd.

Chief Executive Officer
H.O. Jayanagar, Bangalore-11

THE BHARATH CO-OP. BANK LTD.
Jayanagar
Bangalore-11



3. ವಯೋಮಿತಿ:-

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷಗಳಾಗಿರಬೇಕು ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳನ್ವಯ ಈ ಕೆಳಕಂಡ ಗರಿಷ್ಠ ವಯೋಮಿತಿಗೊಳಪಟ್ಟಿರಬೇಕು.

I. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ - 1 ಅಭ್ಯರ್ಥಿಗಳಿಗೆ - ಗರಿಷ್ಠ 40 ವರ್ಷಗಳು

II. ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ (2ಎ,2ಬಿ,3ಎ,3ಬಿ) - ಗರಿಷ್ಠ 38 ವರ್ಷಗಳು

III. ಸಾಮನ್ಯ ವರ್ಗದ ಅಭ್ಯರ್ಥಿಗಳಿಗೆ - ಗರಿಷ್ಠ 35 ವರ್ಷಗಳು

ವಯೋಮಿತಿ ಸಡಿಲಿಕೆ:-

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 11(ಎ) ಉಪಕಲಂ (2) ಮತ್ತು ಬ್ಯಾಂಕಿನ ಸಿಬ್ಬಂದಿ ಸೇವಾ ನಿಯಮಗಳ ಕಂಡಿಕೆ 12.3 (1) ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮ 1957ರ 6.(3ಬಿ) ಓದಿಕೊಂಡಂತೆ ಉಪವಿಧಿ 64 (2)ರ ಪರಂತುಕದ ಪ್ರಕಾರ ಯಾವುದೇ ಸಹಕಾರ ಬ್ಯಾಂಕಿನ ಸೇವೆಯಲ್ಲಿರುವ ನೌಕರರು ಅಥವಾ ಗುತ್ತಿಗೆ ಆಧಾರ ಮೇಲೆ ನೇಮಕವಾದ ನೌಕರರು ಅಥವಾ ಯಾವುದೇ ಸಹಕಾರ/ವಾಣಿಜ್ಯ/ಇನ್ನಿತರ ಹಣಕಾಸು ಸಂಸ್ಥೆಗಳಲ್ಲಿ ಸೇವೆಯಲ್ಲಿ ಈಗಾಗಲೇ ಇರುವ ಯಾವ ವ್ಯಕ್ತಿಯ ವಯಸ್ಸು ಅಂತಹ ಸೇವೆ ಸಲ್ಲಿಸಿರುವಷ್ಟು ವರ್ಷಗಳು ಅಥವಾ 10 ವರ್ಷಗಳ ಅವಧಿ, ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳ ವಯೋಮಿತಿ ಸಡಿಲಿಕೆ ನೀಡಲಾಗುವುದು. ಹಾಲಿ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕಿನ ಸಿಬ್ಬಂದಿ/ತಾತ್ಕಾಲಿಕ ಸಿಬ್ಬಂದಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು.

4. ಆಯ್ಕೆ ವಿಧಾನ:-

ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ :

(1) **ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಹಿರಿಯ ವ್ಯವಸ್ಥಾಪಕರು, ವ್ಯವಸ್ಥಾಪಕರು, ಅಕೌಂಟೆಂಟ್, ಅಸಿಸ್ಟೆಂಟ್ ಅಕೌಂಟೆಂಟ್ ಮತ್ತು ದ್ವಿತೀಯ ದರ್ಜೆ ಸಹಾಯಕರು.**

200 ಅಂಕಗಳ ಲಿಖಿತ ಪರೀಕ್ಷೆ ಇದ್ದು, ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯ ಇಂಗ್ಲೀಷ್‌ಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು, ಸಹಕಾರ ವಿಷಯಕ್ಕೆ 50 ಅಂಕಗಳು ಮತ್ತು ಭಾರತ ಸಂವಿಧಾನಕ್ಕೆ 25 ಅಂಕಗಳು, ಸಂಘದ ಉದ್ದೇಶಗಳು ಮತ್ತು ಕಾರ್ಯಚಟುವಟಿಕೆಗಳಿಗೆ 25 ಅಂಕಗಳನ್ನು ಒಳಗೊಂಡಿರುತ್ತವೆ.

(2) **ಕಂಪ್ಯೂಟರ್ ಮ್ಯಾನೇಜರ್ (ಸಿಸ್ಟಂ ಅಡ್ಮಿನಿಸ್ಟ್ರೇಟರ್ ಮುಖ್ಯಸ್ಥ)**

200 ಅಂಕಗಳ ಲಿಖಿತ ಪರೀಕ್ಷೆ ಇದ್ದು, ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯ ಇಂಗ್ಲೀಷ್‌ಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು ಮತ್ತು ಕಂಪ್ಯೂಟರ್ /ಮಾಹಿತಿ ತಂತ್ರಜ್ಞಾನ/ಬ್ಯಾಂಕಿಂಗ್ ತಂತ್ರಜ್ಞಾನ ಪರೀಕ್ಷೆಗೆ 100 ಅಂಕಗಳನ್ನು ಒಳಗೊಂಡಿರುತ್ತದೆ.

ಈ ಮೇಲಿನ ಹುದ್ದೆಗಳಿಗೆ ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳ ಆಧಾರದ ಮೇಲೆ 1:5 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಯಶಸ್ವಿ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ತಯಾರಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

For The Bharat Co-op. Bank Ltd.

Chief Executive Officer
H.O. Jayanagar, Bangalore-11

THE BHARATH CO-OP. BANK LTD.
Jayanagar
Bangalore-11



(3) ಅಟೆಂಡರ್‌:

ಅಟೆಂಡರ್ ಹುದ್ದೆಯ ನೇಮಕಾತಿಗಾಗಿ ಅಭ್ಯರ್ಥಿಗಳು ನಿಗದಿಪಡಿಸಿರುವ SSLC ವಿದ್ಯಾರ್ಹತೆ ಪರೀಕ್ಷೆಯಲ್ಲಿ ಅವರು ಪಡೆದ ಅಂಕದ ಆಧಾರದ ಮೇಲೆ 1:5 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಯಶಸ್ವಿ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ತಯಾರಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

5. ಅರ್ಜಿ ಶುಲ್ಕ:-

I. ಸಾಮಾನ್ಯ ಹಾಗೂ ಹಿಂದುಳಿದ ಅಭ್ಯರ್ಥಿಗಳಿಗೆ ರೂ.1000/-

II. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗ - 1 ಅಭ್ಯರ್ಥಿಗಳಿಗೆ ರೂ.500/-

III. ಅರ್ಜಿಶುಲ್ಕವನ್ನು ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಇವರ ಹೆಸರಿಗೆ ಡಿ.ಡಿ./ಪೇ ಆರ್ಡರ್/ಪೋಸ್ಟಲ್ ಆರ್ಡರ್ ಮೂಲಕ ಪಾವತಿಸತಕ್ಕದ್ದು.

6. ಸೂಚನೆಗಳು ಹಾಗೂ ಅರ್ಹತಾ ಷರತ್ತುಗಳು:-

1) **ದಿನಾಂಕ:25.05.2022ರ ನೇಮಕಾತಿ ಪ್ರಕಟಣೆಯನುಸಾರ ವಿವಿಧ ಹುದ್ದೆಗಳಿಗೆ ಈಗಾಗಲೇ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪುನಃ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.**

2) ಲಿಖಿತ ಪರೀಕ್ಷೆಗೆ ಅರ್ಹರಿರುವ ಅಭ್ಯರ್ಥಿಗಳಿಗೆ ಪ್ರವೇಶ ಪತ್ರ ಹಾಗೂ ಲಿಖಿತ ಪರೀಕ್ಷೆಯ ದಿನಾಂಕ, ಸ್ಥಳ ಮತ್ತು ಸಮಯವನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು. ಅರ್ಹ ಅಭ್ಯರ್ಥಿಗಳ ಲಿಖಿತ ಪರೀಕ್ಷೆಯ ಪ್ರವೇಶ ಪತ್ರ (Hall-Ticket) ಗಳನ್ನು ಅಂಚೆ ಮೂಲಕ/ಅಭ್ಯರ್ಥಿಗಳು ನೀಡಿರುವ E-mail ಮುಖಾಂತರ ಕಳುಹಿಸಲಾಗುವುದು. ಪ್ರವೇಶ ಪತ್ರವನ್ನು ಲಿಖಿತ ಪರೀಕ್ಷೆಗೆ ಹಾಜರಾಗುವ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು. ಲಿಖಿತ ಪರೀಕ್ಷೆಗೆ/ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಿಂದಲೇ ಹಾಜರಾಗತಕ್ಕದ್ದು.

3) ಅಭ್ಯರ್ಥಿಗಳು ಪದವಿ ಎಲ್ಲಾ ಸೆಮಿಸ್ಟರ್/ವರ್ಷವಾರುಗಳ ಕ್ರೋಢೀಕೃತ ಅಂಕಗಳ ಶೇಕಡಾವಾರು ಆಧಾರದ ಮೇಲೆ ಪ್ರತಿಶತ ಪರಿಗಣಿಸಲಾಗುವುದು. ಕಾರಣ ಸೆಮಿಸ್ಟರ್/ವರ್ಷಗಳ ಎಲ್ಲಾ ಅಂಕಗಳ ಪಟ್ಟಿಯನ್ನು ಲಗತ್ತಿಸಬೇಕು.

4) ಅಭ್ಯರ್ಥಿಗಳಿಗೆ ಕನ್ನಡದಲ್ಲಿ ವ್ಯವಹಾರದ ಜ್ಞಾನ, ಸ್ಪಷ್ಟವಾಗಿ ಓದಲು ಮತ್ತು ಬರೆಯಲು ಬರಬೇಕು.

5) ಅಭ್ಯರ್ಥಿಗಳು ಭಾರತೀಯ ನಾಗರೀಕರಾಗಿದ್ದು, ಕರ್ನಾಟಕದಲ್ಲಿ ಕನಿಷ್ಠ 10 ವರ್ಷಗಳು ವಾಸವಾಗಿರತಕ್ಕದ್ದು.

6) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನು ಉಂಟುಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತವಾಗಿರಬೇಕು. ಯೋಗ್ಯ ಹಾಗೂ ಸೂಕ್ತವಾದ ಅಭ್ಯರ್ಥಿಗಳನ್ನು ಮಾತ್ರ ನೇಮಕಾತಿ ಮಾಡಿಕೊಳ್ಳುವ ಅಧಿಕಾರವನ್ನು ಆಡಳಿತ ಮಂಡಳಿ ಕಾಯ್ದಿರಿಸಿಕೊಂಡಿದೆ.

7) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಮೀಸಲಾತಿಗಾಗಿ ಜಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದಿರಬೇಕು ಹಾಗೂ ಚಾಲ್ತಿಯಲ್ಲಿರತಕ್ಕದ್ದು ಹಾಗೂ ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಮೀಸಲಾತಿಗಾಗಿ ಜಾತಿ ಹಾಗೂ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಲು ನಿಗದಿಪಡಿಸಿದ 6 ತಿಂಗಳ ಒಳಗೆ ಪ್ರಮಾಣೀಕರಿಸಲ್ಪಟ್ಟಿರಬೇಕು. ನಿಗದಿತ ನಮೂನೆ ಲಗತ್ತಿಸಿದೆ.

For The Bharat Co-op. Bank Ltd.

Chief Executive Officer
H.O. Jayanagar, Bangalore-11

THE BHARATH CO-OP. BANK LTD. Jayanagar Bangalore-11



8) ಅರ್ಜಿ ಶುಲ್ಕವನ್ನು ಪಾವತಿಸದ, ಸ್ಪಷ್ಟ ಮಾಹಿತಿಗಳನ್ನು ನೀಡದ ಮತ್ತು ತಪ್ಪು ಮಾಹಿತಿಯನ್ನು ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಯಾವುದೇ ನೋಟೀಸ್ ನೀಡದೆ ತಿರಸ್ಕರಿಸಲಾಗುವುದು.

9) ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ ಅಂತಹ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿ, ಪ್ರತ್ಯೇಕವಾಗಿ ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು.

10) ಒಮ್ಮೆ ಅರ್ಜಿ ಶುಲ್ಕವನ್ನು ಪಾವತಿಸಿದ ನಂತರ ಹಿಂದುರುಗಿಸಲಾಗುವುದಿಲ್ಲ.

11) ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಸಾರ್ವತ್ರಿಕ ರಜೆ ದಿನವಾಗಿದ್ದರೆ ಮುಂದಿನ ಕೆಲಸದ ದಿನವು ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗಿರುತ್ತದೆ. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

12) ಕೋಷ್ಟಕದಲ್ಲಿ ನಮೂದಿಸಿರುವ ಆಯಾ ಹುದ್ದೆಗೆ ಸಂಬಂಧಪಟ್ಟ ಸೇವಾ ಅನುಭವದ ದೃಢೀಕರಣ ಪತ್ರವನ್ನು ಲಗತ್ತಿಸತಕ್ಕದ್ದು.

13) ಹುದ್ದೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಬ್ಯಾಂಕಿನ ಅನುಮೋದಿತ ಉಪವಿಧಿಗಳು, ಸೇವಾ ನಿಯಮಗಳು, ವೃಂದ ಮತ್ತು ನೇಮಕಾತಿ ನಿಯಮಗಳು ಅನ್ವಯಿಸುತ್ತವೆ.

14) ಅರ್ಜಿ ಸಲ್ಲಿಸಲು ಜಾಹಿರಾತಿನಲ್ಲಿ ಪ್ರಕಟಿಸಿದ ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಗಳಿಗೆ ನಿಗದಿಪಡಿಸಿದ ವಯೋಮಿತಿ ಮೀರಿರಬಾರದು.

15) ಅಭ್ಯರ್ಥಿಗಳ ಆಯ್ಕೆ ಬ್ಯಾಂಕಿನ ನೇಮಕಾತಿ ಪ್ರಾಧಿಕಾರದ ಶಿಫಾರಸ್ಸಿನಂತೆ ಆಡಳಿತ ಮಂಡಳಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

16) ಈ ಪ್ರಕಟಣೆಯಲ್ಲಿ ಪ್ರಕಟಿಸಿರುವ ಹುದ್ದೆಗಳ ಸಂಖ್ಯೆಯಲ್ಲಿ ಬದಲಾವಣೆ (ಹೆಚ್ಚು ಅಥವಾ ಕಡಿಮೆ) ಮಾಡುವ ಅಥವಾ ಯಾವುದೇ ಕಾರಣ ನೀಡದೆ ನೇಮಕಾತಿಯನ್ನು ರದ್ದುಪಡಿಸುವ ಹಕ್ಕನ್ನು ಆಡಳಿತ ಮಂಡಳಿ ಹೊಂದಿರುತ್ತದೆ.

17) ಅರ್ಜಿ ಸಲ್ಲಿಸಿದ ಮಾತ್ರಕ್ಕೆ ಅಥವಾ ಆಯ್ಕೆ ಪಟ್ಟಿಯಲ್ಲಿ ಸೇರ್ಪಡೆಯಾದ ಮಾತ್ರಕ್ಕೆ ಅಭ್ಯರ್ಥಿಗಳು ನೇಮಕಾತಿ ಹಕ್ಕನ್ನು ಪಡೆದುಕೊಳ್ಳುವುದಿಲ್ಲ. ನೇಮಕಾತಿಯು ಯಾವುದೇ ಹಂತದಲ್ಲಿ ಅನರ್ಹತೆಯ ಕಾರಣದಿಂದಾಗಿ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸುವ ಅಥವಾ ಇತರೆ ಆಡಳಿತಾತ್ಮಕ ಕಾರಣಗಳಿಂದಾಗಿ ನೇಮಕಾತಿಯನ್ನು ರದ್ದುಗೊಳಿಸುವ ಅಧಿಕಾರವನ್ನು ಆಡಳಿತ ಮಂಡಳಿ ಕಾಯ್ದಿರಿಸಿಕೊಂಡಿದೆ. ಮೇಲಿನ ಯಾವುದೇ ವಿಚಾರಗಳಲ್ಲಿ ಆಡಳಿತ ಮಂಡಳಿ ತೀರ್ಮಾನವೇ ಅಂತಿಮವಾಗಿರುತ್ತದೆ.

18) ಮುಚ್ಚಿದ ಲಕೋಟೆಯ ಮೇಲೆ ಯಾವ ಹುದ್ದೆಗೆ ಅರ್ಜಿ ಸಲ್ಲಿಸಿರುತ್ತಿರೋ ಆ ಹುದ್ದೆಯ ಹೆಸರನ್ನು ನಮೂದಿಸಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ., ನಂ.30, 15ನೇ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು - 560 011 ಇಲ್ಲಿಗೆ ಸಲ್ಲಿಸುವುದು.

For The Bharat Co-op. Bank Ltd.

Chief Executive Officer
H.O. Jayanagar, Bangalore-11

THE BHARATH CO-OP. BANK LTD. Jayanagar Bangalore-11



7. ಕಡ್ಡಾಯವಾಗಿ ಲಗತ್ತಿಸಬೇಕಾದ/ಹಾಜರುಪಡಿಸಬೇಕಾದ ದೃಢೀಕರಣ ಪ್ರಮಾಣ ಪತ್ರಗಳು:-

ಅರ್ಜಿಯ ಜೊತೆ ಸಂಬಂಧಿಸಿದ ಈ ಕೆಳಕಂಡ ಪ್ರಮಾಣ ಪತ್ರಗಳನ್ನು ಸ್ವ ಹಸ್ತಾಕ್ಷರದಿಂದ ದೃಢೀಕರಿಸಿ ಲಗತ್ತಿಸುವುದು ಹಾಗೂ ಮೌಖಿಕ ಸಂದರ್ಶನಕ್ಕೆ ಅರ್ಹರಾದಲ್ಲಿ ಸದರಿ ಮೂಲ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಹಾಜರುಪಡಿಸುವುದು.

(1) ಇತ್ತೀಚಿನ ಪಾಸ್ ಪೋರ್ಟ್ ಅಳತೆಯ 3 ಭಾವಚಿತ್ರ. (ಭಾವಚಿತ್ರದ ಹಿಂಭಾಗ ಸಹಿ ಮಾಡಬೇಕು)

(2) ಅರ್ಜಿ ಸಲ್ಲಿಸುವ ವಿವಿಧ ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆಗೆ ಎಲ್ಲಾ ಸೆಮಿಸ್ಟರ್‌ಗಳ/ವರ್ಷಗಳ ಪ್ರಮಾಣ ಪತ್ರಗಳ ಅಂಕ ಪಟ್ಟಿಗಳು.

(3) ವಯಸ್ಸಿನ ದೃಢೀಕರಣ ಕುರಿತು ಎಸ್.ಎಸ್.ಎಲ್.ಸಿ. ಅಂಕಪಟ್ಟಿ.

(4) ಸೇವಾ ಅನುಭವ ಪ್ರಮಾಣ ಪತ್ರ (ನಿಗದಿತ ನಮೂನೆಯಲ್ಲಿ).

(5) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಮೀಸಲಾತಿಗಾಗಿ ಜಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದಿರಬೇಕು ಹಾಗೂ ಚಾಲ್ತಿಯಲ್ಲಿರತಕ್ಕದ್ದು ಹಾಗೂ ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಮೀಸಲಾತಿಗಾಗಿ ಜಾತಿ ಹಾಗೂ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಲು ನಿಗದಿಪಡಿಸಿದ 6 ತಿಂಗಳ ಒಳಗೆ ಪ್ರಮಾಣೀಕರಿಸಲ್ಪಟ್ಟಿರಬೇಕು. ನಿಗದಿತ ನಮೂನೆ ಲಗತ್ತಿಸಿದೆ.

8. ಅಭ್ಯರ್ಥಿಯು ಸಂದರ್ಶನದ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸಬೇಕಾದ ಮೂಲ ಪ್ರಮಾಣ ಪತ್ರಗಳು ಈ ಕೆಳಕಂಡಂತಿರುತ್ತವೆ.

(1) ವಿವಿಧ ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ/ಎಲ್ಲಾ ಸೆಮಿಸ್ಟರ್‌ಗಳ/ವರ್ಷಗಳ ಪ್ರಮಾಣ ಪತ್ರಗಳು ಅಥವಾ ಅಂಕಪಟ್ಟಿಗಳು.

(2) ಜನ್ಮ ದಿನಾಂಕವನ್ನು ನಮೂದಿಸಿರುವ S.S.L.C ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ (Extract of Cumulative Record)/ಜನನ ಪ್ರಮಾಣ ಪತ್ರ.

(3) ವಿವಿಧ ಮೀಸಲಾತಿಗಳನ್ನು ಕೋರಿದ್ದಲ್ಲಿ, ಮೀಸಲಾತಿ ಪ್ರಮಾಣ ಪತ್ರಗಳು ಹಾಗೂ ಹಿಂದುಳಿದ ವರ್ಗಗಳ ಮೀಸಲಾತಿಗಾಗಿ ಆದಾಯ ಪ್ರಮಾಣ ಪತ್ರ.

(4) ಅನುಭವ ಪ್ರಮಾಣ ಪತ್ರಗಳು. (ನಿಗದಿತ ನಮೂನೆಯಲ್ಲಿ)

(5) ಕಂಪ್ಯೂಟರ್ ನಿರ್ವಹಣೆಯಲ್ಲಿ ಸಂಬಂಧಪಟ್ಟ ಹುದ್ದೆಗಳಿಗೆ ನಿಗದಿಪಡಿಸಿರುವಂತೆ ಜ್ಞಾನ ಹೊಂದಿರುವ ಪ್ರಮಾಣ ಪತ್ರಗಳು.

(6) ಇಬ್ಬರು ಸ್ಥಳೀಯ ಗಣ್ಯ ವ್ಯಕ್ತಿಗಳಿಂದ (ಚುನಾಯಿತ ಪ್ರತಿನಿಧಿಗಳು ಅಥವಾ ಗೆಜೆಟೆಡ್ ಅಧಿಕಾರಿಗಳಿಂದ) ಪಡೆದ ನಡತೆ ಪ್ರಮಾಣ ಪತ್ರ. (ನಿಗದಿತ ನಮೂನೆಯಲ್ಲಿ)

ಸಿಬ್ಬಂದಿ ನೇಮಕಾತಿ ಸಮಿತಿ ಪರವಾಗಿ
ಸಹಿ/-
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ: 10.01.2023

For The Bharat Co-op. Bank Ltd.

Chief Executive Officer
H.O. Jayanagar, Bangalore-11